## ಹೆಸರಿನಲ್ಲೇನಿದೆ?

ನಮಗೆ ಅವಳಿ ಜವಳಿ ಹೆಣ್ಣು ಮಕ್ಕಳಾದವು. ನನ್ನವಳು ಕೊನೆಯಲ್ಲಿ 'ವರಿ'ಯಿಂದ ಬರುವ ಹೆಸರು ಬೇಕೆಂದಳು. ಎಷ್ಟು ಯೋಚಿಸಿದರೂ, ಹೆಸರುಗಳ ಪುಸ್ತಕಗಳನ್ನು ತಂದು ಹುಡುಕಿದರೂ, ಯಾರಲ್ಲಿ ಕೇಳಿದರೂ ಕೊನೆಯಲ್ಲಿ 'ವರಿ'ಯಿಂದ ಬರುವ ಹೆಸರು ಸಿಗಲಿಲ್ಲ. ನನ್ನ ಅಕ್ಕನ ಐದು ವರ್ಷದ ಮಗಳು ನಮ್ಮ ಸಮಸ್ಯೆ ಕೇಳಿ 'ಅದಕ್ಕೆ ಯಾಕಷ್ಟು ತಲೆ ಕೆಡಿಸಿಕೊಳ್ಳುತ್ತಿದ್ದೀರಿ, ಜನವರಿ, ಫೆಬ್ರುವರಿ ಎಂದು ಹೆಸರಿಡಿ' ಎಂದಳು.


**ಶರತ್ ಕುಮಾರ್ ತೋನ್ಸೆ**



## ಎಷ್ಟು ಉಪವಾಸ ತಿಂದೆ?

ನಾಲ್ಕು ವರ್ಷದ ನನ್ನ ಮೊಮ್ಮಗ ಸಮರ್ಥ ದಿನಕ್ಕೆ ಏಳೆಂಟು ಬಾರಿ ಫೋನ್ ಮಾಡಿ ನಮ್ಮೊಡನೆ ಮಾತಾಡುತ್ತಾನೆ. ಮೊನ್ನೆ ಫೋನ್ ಮಾಡಿದಾಗ 'ತಾತಾ, ಏನು ತಿಂಡಿ ತಿಂದೆ?' ಎಂದು ಕೇಳಿದ. ಅದಕ್ಕೆ ಅವರ ತಾತ 'ಇವತ್ತು ಸಂಕಷ್ಟಹರ ಚೌತಿ ಉಪವಾಸ' ಎಂದರು. 'ಹೌದಾ ತಾತಾ, ಎಷ್ಟು ಉಪವಾಸ ತಿಂದೆ?' ಎಂದ. ನಂತರ ನನ್ನೊಡನೆ 'ಅಜ್ಜೀ, ತಾತನಿಗೆ ಎಷ್ಟು ಉಪವಾಸ ಮಾಡಿಕೊಟ್ಟೆ? ನನಗೆ ಒಮ್ಮೆಯೂ ಉಪವಾಸ ಮಾಡಿಕೊಟ್ಟಿಲ್ಲ ನೀನು' ಎಂದಾಗ ನಂಗೆ ನಗು ತಡೆಯಲಾಗಲಿಲ್ಲ. 'ಪುಟ್ಟಾ ತಿಂಡಿ–ಊಟ ಏನೂ ಮಾಡದೆ ಖಾಲಿ ಹೊಟ್ಟೆಯಲ್ಲಿರುವುದೇ ಉಪವಾಸ' ಎಂದು ವಿವರಿಸಿದೆ. ಅದವನಿಗೆ ಎಷ್ಟು ಅರ್ಥವಾಯಿತೋ ಗೊತ್ತಿಲ್ಲ. ಇನ್ನೊಂದು ಸಲ ಫೋನ್ ಮಾಡಿ 'ತಾತಾ, ಈಗೇಷ್ಟು ಉಪವಾಸ ತಿಂದೆ?' ಎಂದು ಕೇಳಿದ.

**ಶಶಿರೇಖಾ ನಾಗೇಂದ್ರ**



ಚಿತ್ರಗಳು: ಗಣೇಶ ಆಚಾರ್ಯ